# ದಾವಣಗೆರೆ ವಿಶ್ವವಿದ್ಯಾನಿಲಯ
# DAVANGERE UNIVERSITY

ಕುಲಸಚಿವ (ಪರೀಕ್ಷಾಂಗ) ರವರ ಕಚೇರಿ,
ಶಿವಗಂಗೋತ್ರಿ, ದಾವಣಗೆರೆ-577007.
ದೂರವಾಣಿ ಸಂಖ್ಯೆ: 08192-208420.

Office of the Registrar (Evaluation),
Shivagangothri, Davanagere -577007.
Phone No. 08192-208420.

**Email**: examination@davangereuniversity.ac.in

ಸಂಖ್ಯೆ:ದಾವಿ:ಪವಿ:ಆಶಾ:2025-26/240    ದಿನಾಂಕ:06.04.2026

## -: ಪ್ರಕಟಣೆ :-

| | | |
|---|---|---|
| ವಿಷಯ | : | **ಮೇ/ಜೂನ್-2026ರಲ್ಲಿ ನಡೆಯುವ ಸ್ನಾತಕ NEP ಪಠ್ಯಕ್ರಮದ 2ನೇ, 4ನೇ ಮತ್ತು 6ನೇ ಸೆಮಿಸ್ಟರ್‌ನ (ರೆಗ್ಯುಲರ್ ಮತ್ತು ರಿಪೀಟರ್ಸ್), ಹಾಗೂ SEP ಪಠ್ಯಕ್ರಮದ 2ನೇ ಮತ್ತು 4ನೇ ಸೆಮಿಸ್ಟರ್‌ನ (ರೆಗ್ಯುಲರ್ ಮತ್ತು ರಿಪೀಟರ್ಸ್) ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿ/ಶುಲ್ಕ ಪಾವತಿಸುವ ಕುರಿತು.** |
| ಉಲ್ಲೇಖ | : | **ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:18.03.2026** |

*****

ವಿಶ್ವವಿದ್ಯಾನಿಲಯದಲ್ಲಿ ಮೇ/ಜೂನ್-2026ರ ಮಾಹೆಯಲ್ಲಿ ನಡೆಸಲಾಗುವ ಸ್ನಾತಕ **NEP** ಪಠ್ಯಕ್ರಮದ(ಬಿ.ಎ/ಬಿ.ಎಸ್ಸಿ/ಬಿ.ಕಾಂ/ಬಿ.ಬಿ.ಎ/ಬಿ.ಸಿ.ಎ/ಬಿ.ಎಸ್.ಡಬ್ಲ್ಯೂ) 2ನೇ, 4ನೇ ಮತ್ತು 6ನೇ ಸೆಮಿಸ್ಟರ್‌ನ (ರೆಗ್ಯುಲರ್ & ರಿಪೀಟರ್ಸ್) ಹಾಗೂ **SEP** ಪಠ್ಯಕ್ರಮದ (ಬಿ.ಎ./ಬಿ.ಎಸ್ಸಿ/ಬಿ.ಎಸ್ಸಿ(Hsc)/ಬಿ.ಕಾಂ/ಬಿ.ಬಿ.ಎ/ಬಿ.ಸಿ.ಎ/ಬಿ.ಎಸ್.ಡಬ್ಲ್ಯೂ/ಬಿ.ಕಾಂ-ಬಿ.ಎಫ್.ಎಸ್.ಐ 2ನೇ ಮತ್ತು 4ನೇ ಸೆಮಿಸ್ಟರ್‌ನ (ರೆಗ್ಯುಲರ್ & ರಿಪೀಟರ್ಸ್) ಪ್ರಾಯೋಗಿಕ/ಲಿಖಿತ ಪರೀಕ್ಷೆಗಳು ಪ್ರಾರಂಭವಾಗಲಿವೆ. ಲಿಖಿತ ಪರೀಕ್ಷೆಗಳ ವಿವರವಾದ ಪರೀಕ್ಷಾ ವೇಳಾಪಟ್ಟಿಯನ್ನು ನಂತರ ಪ್ರಕಟಿಸಲಾಗುವುದು. ಇದಕ್ಕೆ ಪೂರಕವಾದ ಇತರೆ ಮಾಹಿತಿಗಳನ್ನು ಈ ಕೆಳಗೆ ನೀಡಲಾಗಿದೆ. ಈ ಸಂಬಂಧವಾಗಿ ಪರೀಕ್ಷಾ ಶುಲ್ಕವನ್ನು ಡಿಜಿಟಲ್ ಮಾಧ್ಯಮದ ಮೂಲಕ ಸಂದಾಯ ಮಾಡಲು ತಿಳಿಸಲಾಗಿದೆ.

| ಕ್ರ.ಸಂ | ವಿವರ | ದಿನಾಂಕ |
|---|---|---|
| 01 | ಪ್ರಾಯೋಗಿಕ ಪರೀಕ್ಷೆಗಳು (ಬಿ.ಎಸ್ಸಿ, ಬಿ.ಸಿ.ಎ) | 07.05.2026 ರಿಂದ 22.05.2026 |
| 02 | ಲಿಖಿತ ಪರೀಕ್ಷೆಗಳು | 27.05.2026 ರಿಂದ |

ಪರೀಕ್ಷೆ ತೆಗೆದುಕೊಳ್ಳಲು ನಿಯಮಾನುಸಾರ ಅರ್ಹರಾದ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಮತ್ತು ಪರೀಕ್ಷಾ ಶುಲ್ಕವನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಮೂಲಕ ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸಲ್ಲಿಸಲು ತಿಳಿಸಲಾಗಿದೆ.

### ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು

| | | |
|---|---|---|
| ದಂಡಶುಲ್ಕವಿಲ್ಲದೆ | : | 07.04.2026 ರಿಂದ 21.04.2026 |
| ದಂಡಶುಲ್ಕ ರೂ.110=00 ರಂತೆ ಪ್ರತಿ ಸೆಮಿಸ್ಟರ್‌ಗೆ | : | 22.04.2026 ರಿಂದ 23.04.2026 |
| ದಂಡಶುಲ್ಕ ರೂ.550=00 ರಂತೆ ಪ್ರತಿ ಸೆಮಿಸ್ಟರ್‌ಗೆ | : | 24.04.2026 |

# ಶುಲ್ಕದ ವಿವರಗಳು

**1. ಬಿ.ಎ ವಿದ್ಯಾರ್ಥಿಗಳಿಗೆ**

| ಕ್ರ.ಸಂ | ವಿವರ | ಪ್ರಸ್ತುತ ಶುಲ್ಕದ ವಿವರ |
|---|---|---|
| 1 | ಪರೀಕ್ಷಾ ಅರ್ಜಿ ಶುಲ್ಕ | ರೂ. 110–00 |
| 2 | ಪ್ರತಿ ಸೆಮಿಸ್ಟರ್ (ಪೂರ್ಣ ಪರೀಕ್ಷೆಗೆ) | ಪರೀಕ್ಷಾ ಶುಲ್ಕ ರೂ. 622–00<br>ಅಂಕಪಟ್ಟಿ ಶುಲ್ಕ ರೂ. 204–00<br>-----------<br>ಒಟ್ಟು ಶುಲ್ಕ ರೂ. = 826–00 |
| 3 | ಪ್ರತಿ ಪತ್ರಿಕೆಗೆ (ಥಿಯರಿ ಪರೀಕ್ಷೆ)<br>(ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ) | ರೂ. 187–00 |
| 4 | ಪ್ರಾಯೋಗಿಕ ಪರೀಕ್ಷೆಗೆ (ಪ್ರತಿ ಪತ್ರಿಕೆಗೆ)<br>(ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ) | ರೂ. 143–00 |
| 5 | ರಿಪೀಟರ್ಸ್ ವಿದ್ಯಾರ್ಥಿಗಳಿಗೆ–ಅಂಕಪಟ್ಟಿ ಶುಲ್ಕ | ರೂ. 204–00 |

**2. ಬಿ.ಎಸ್ಸಿ ವಿದ್ಯಾರ್ಥಿಗಳಿಗೆ**

| ಕ್ರ.ಸಂ | ವಿವರ | ಪ್ರಸ್ತುತ ಶುಲ್ಕದ ವಿವರ |
|---|---|---|
| 1 | ಪರೀಕ್ಷಾ ಅರ್ಜಿ ಪ್ರಕ್ರಿಯೆ ಶುಲ್ಕ | ರೂ. 110–00 |
| 2 | ಪ್ರತಿ ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ | ಪರೀಕ್ಷಾ ಶುಲ್ಕ ರೂ. 787–00<br>ಅಂಕಪಟ್ಟಿ ಶುಲ್ಕ ರೂ. 204–00<br>----------<br>ಒಟ್ಟು ಶುಲ್ಕ ರೂ. = 991–00 |
| 3 | ಪ್ರತಿ ಪತ್ರಿಕೆಗೆ ಥಿಯರಿ ಪರೀಕ್ಷೆ<br>(ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ) | ರೂ. 187–00 |
| 4 | ಪ್ರಾಯೋಗಿಕ ಪರೀಕ್ಷೆಗೆ ಪ್ರತಿ ಪತ್ರಿಕೆಗೆ<br>(ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ) | ರೂ. 143–00 |
| 5 | ರಿಪೀಟರ್ಸ್ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಶುಲ್ಕ | ರೂ. 204–00 |

**3. ಬಿ.ಕಾಂ/ಬಿ.ಕಾಂ(ಬಿ.ಎಫ್.ಎಸ್.ಐ) ವಿದ್ಯಾರ್ಥಿಗಳಿಗೆ**

| ಕ್ರ.ಸಂ | ವಿವರ | ಪ್ರಸ್ತುತ ಶುಲ್ಕದ ವಿವರ |
|---|---|---|
| 1 | ಪರೀಕ್ಷಾ ಅರ್ಜಿ ಪ್ರಕ್ರಿಯೆ ಶುಲ್ಕ | ರೂ. 110–00 |
| 2 | ಪ್ರತಿ ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ | ಪರೀಕ್ಷಾ ಶುಲ್ಕ ರೂ. 677–00<br>ಅಂಕಪಟ್ಟಿ ಶುಲ್ಕ ರೂ. 204–00<br>---------<br>ಒಟ್ಟು ಶುಲ್ಕ ರೂ. = 881–00 |
| 3 | ಪ್ರತಿ ಪತ್ರಿಕೆಗೆ ಥಿಯರಿ ಪರೀಕ್ಷೆ<br>(ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ) | ರೂ. 187–00 |
| 4 | ರಿಪೀಟರ್ಸ್ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಶುಲ್ಕ | ರೂ. 204–00 |

**4. ಬಿ.ಬಿ.ಎಂ/ಬಿ.ಸಿ.ಎ/ಬಿ.ಎಸ್.ಡಬ್ಲ್ಯೂ/ಬಿ.ಬಿ.ಎ ವಿದ್ಯಾರ್ಥಿಗಳಿಗೆ**

| ಕ್ರ.ಸಂ | ವಿವರ | ಪ್ರಸ್ತುತ ಶುಲ್ಕದ ವಿವರ |
|---|---|---|
| 1 | ಪರೀಕ್ಷಾ ಅರ್ಜಿ ಪ್ರಕ್ರಿಯೆ ಶುಲ್ಕ | ರೂ. 110-00 |
| 2 | ಪ್ರತಿ ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ | ಪರೀಕ್ಷಾ ಶುಲ್ಕ ರೂ. 1051-00<br>ಅಂಕಪಟ್ಟಿ ಶುಲ್ಕ ರೂ. 204-00<br>----------<br>ಒಟ್ಟು ಶುಲ್ಕ ರೂ. 1,255-00 |
| 3 | ಪ್ರತಿ ಪತ್ರಿಕೆಗೆ ಥಿಯರಿ ಪರೀಕ್ಷೆ<br>(ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ) | ರೂ. 220-00 |
| 4 | ಪ್ರಾಯೋಗಿಕ ಪರೀಕ್ಷೆಗೆ ಪ್ರತಿ ಪತ್ರಿಕೆಗೆ<br>(ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ) | ರೂ. 143-00 |
| 5 | ರಿಪೀಟರ್ಸ್ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಶುಲ್ಕ | ರೂ. 204-00 |

## -: ವಿದ್ಯಾರ್ಥಿಗಳಿಗೆ ಸೂಚನೆ :-

1. ವಿದ್ಯಾರ್ಥಿಗಳು Online ಮುಖಾಂತರ ಅರ್ಜಿ ಸಲ್ಲಿಸಲು https://uucms.karnataka.gov.in/Login/Index ನಲ್ಲಿ Student login ಆಗಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿ ಪರೀಕ್ಷಾ ಅರ್ಜಿಯನ್ನು ಸಲ್ಲಿಸಬೇಕು.
2. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿ ಮಾಡುವುದಕ್ಕೆ ಮುಂಚಿತವಾಗಿ ಎಲ್ಲಾ ಮಾಹಿತಿಗಳ ನಿಖರತೆಯನ್ನು ಖಾತರಿಪಡಿಸಿಕೊಳ್ಳತಕ್ಕದ್ದು.
3. ವಿದ್ಯಾರ್ಥಿಗಳು ಯಾವುದೇ ಪರೀಕ್ಷೆಯನ್ನು ಪ್ರಥಮ ಅವಕಾಶದಲ್ಲಿ ಬರೆಯುತ್ತಿದ್ದರೆ, ಅಂತಹ ಸಂದರ್ಭದಲ್ಲಿ ಎಲ್ಲಾ ವಿಷಯಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳುವುದು.
4. ವಿದ್ಯಾರ್ಥಿಗಳು ಯಾವುದೇ ಪರೀಕ್ಷೆಯನ್ನು ಮರು ಅವಕಾಶದಲ್ಲಿ ಬರೆಯುತ್ತಿದ್ದರೆ, ಅಂತಹ ಸಂದರ್ಭದಲ್ಲಿ ವಿಷಯಗಳ ಆಯ್ಕೆಯು ವಿದ್ಯಾರ್ಥಿಗೆ ಇರುವುದಿಲ್ಲ.
5. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸುವುದಕ್ಕೆ ಮುಂಚಿತವಾಗಿ ಪರೀಕ್ಷೆ ಬರೆಯಬೇಕಾದ ವಿಷಯಗಳನ್ನು ಖಚಿತ ಪಡಿಸಿಕೊಳ್ಳುವುದು.
6. ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವನ್ನು ಪಾವತಿ ಮಾಡುವ ವಿಧಾನ.

ವಿದ್ಯಾರ್ಥಿಯು UUCMS login ಮುಖಾಂತರ Payment Gateway ಸೌಲಭ್ಯವನ್ನು ಬಳಸಿಕೊಂಡು (Debit Card / Credit Card / Net Banking / Wallet, ಇತ್ಯಾದಿ) ಹಣ ಪಾವತಿಸಬಹುದು.

ಪರೀಕ್ಷಾ ಶುಲ್ಕವನ್ನು ಪಾವತಿಸಿದ ನಂತರ ಶೈಕ್ಷಣಿಕ ಅವಧಿ ಮುಗಿಯುವರೆಗೂ ತರಗತಿಗಳಿಗೆ ಹಾಜರಾಗಿ ನಿಯಮಾನುಸಾರ ಕನಿಷ್ಠ 75% ಹಾಜರಾತಿ ಗಳಿಸುವುದು ಕಡ್ಡಾಯವಾಗಿರುತ್ತದೆ. ಇಲ್ಲವಾದಲ್ಲಿ ಪರೀಕ್ಷೆ ಬರೆಯಲು ಅನರ್ಹರಾಗಿರುತ್ತಾರೆ.

7. ವಿದ್ಯಾರ್ಥಿಗಳು Online Payment Success ಆಗಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ಶುಲ್ಕ ಪಾವತಿ ಸ್ಥಿತಿಯು ಆರಂಭಿಕ (Initiate) ಸ್ಥಿತಿಯಲ್ಲಿದ್ದರೆ ದಯವಿಟ್ಟು ಈ ಕೆಳಕಂಡ ಚಟುವಟಿಕೆಯನ್ನು ಮಾಡುವ ಮೂಲಕ ಸರಿಪಡಿಸಿಕೊಳ್ಳುವುದು.

   **Exam Menu->Student fee Payment Transaction details->Enter your USN Number->Click on Check Payment status button in the action column->the latest payment status will be updated.**

## ವಿಶೇಷ ಸೂಚನೆ

- ವಿದ್ಯಾರ್ಥಿಗಳು Internet Browsing centerನ ಮಾಲೀಕರ ಬ್ಯಾಂಕ್ ಖಾತೆಯ ಮೂಲಕ ವಿಶ್ವವಿದ್ಯಾನಿಲಯಕ್ಕೆ ಹಣ ಪಾವತಿಸುವ ಸಂದರ್ಭದಲ್ಲಿ ಉಂಟಾಗುವ ತಾಂತ್ರಿಕ ತೊಂದರೆಗಳಿಗೆ ವಿದ್ಯಾರ್ಥಿಗಳೇ ಜವಾಬ್ದಾರರಾಗಿರುತ್ತಾರೆ ಹಾಗೂ ಎರಡು ಬಾರಿ ಶುಲ್ಕ ಪಾವತಿಸಿದ್ದಲ್ಲಿ ಮಾರುಪಾವತಿಗೆ (No Refund) ಅವಕಾಶ ಇರುವುದಿಲ್ಲ.
- ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಕೂಡ ನಿಗದಿತ ಸಮಯದಲ್ಲಿ ಪರೀಕ್ಷಾ ಶುಲ್ಕ ಪಾವತಿಸಬೇಕು.

## –: ಪ್ರಾಚಾರ್ಯರಿಗೆ ಸೂಚನೆ :–

1. ಕಾಲೇಜಿನ ಪ್ರಾಂಶುಪಾಲರು ಪರೀಕ್ಷೆಗೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನು UUCMSನ College login ಮುಖಾಂತರ ಮಾಡಬೇಕು.
2. ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಕಟ್ಟುವುದಕ್ಕಿಂತ ಮುಂಚಿತವಾಗಿ ಪ್ರವೇಶಾನುಮೋದನೆ ಶೈಕ್ಷಣಿಕ ಅರ್ಹತೆ ಹೊಂದಿದ್ದಾರೆ ಎಂದು ಖಚಿತ ಪಡಿಸಿಕೊಳ್ಳಬೇಕು.
3. ಕಾಲೇಜಿನ ಪ್ರಾಂಶುಪಾಲರು UUCMSನ login ಮುಖಾಂತರ ವಿದ್ಯಾರ್ಥಿಗಳ ಪರೀಕ್ಷೆ ಅರ್ಹತೆಯನ್ನು ದೃಢೀಕರಿಸಬೇಕು.
4. ಕಾಲೇಜು ದೃಢೀಕರಿಸಿದ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ UUCMSನ login ಮುಖಾಂತರ ತಿಳಿಸಲಾಗುವುದು.
5. S.S.P ಪೋರ್ಟಲ್ ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ವಿದ್ಯಾರ್ಥಿ ವೇತನ ಜಮಾ ಮಾಡಲಾಗುತ್ತಿರುವುದರಿಂದ, ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು.
6. ರೂ. 2.5 ಲಕ್ಷಗಳ ಆದಾಯಕ್ಕಿಂತ ಮೇಲ್ಪಟ್ಟ ಎಸ್. ಸಿ / ಎಸ್.ಟಿ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು. ಮರುಯತ್ನದ (Repeaters) ಮತ್ತು ದಂಡ ಶುಲ್ಕದೊಂದಿಗೆ ಪರೀಕ್ಷಾ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಯಾವುದೇ ಶುಲ್ಕ ವಿನಾಯಿತಿ ಇರುವುದಿಲ್ಲ.
7. ಪ್ರವರ್ಗ–1ಕ್ಕೆ 2.5ಲಕ್ಷ ಹಾಗೂ ರೂ. 1ಲಕ್ಷ ಅಥವಾ ಇದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ 2ಎ, 2ಬಿ, 3ಎ, 3ಬಿ ಹಾಗೂ ಇತರೆ Freshers ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಆದರೆ, ವಿದ್ಯಾರ್ಥಿಗಳ ಅರ್ಹತೆ ಮತ್ತು ಮೆರಿಟ್ ಆಧರಿಸಿ ಸರ್ಕಾರದ ಅನುದಾನದ ಲಭ್ಯತೆಗೆ ಒಳಪಟ್ಟು ಶುಲ್ಕ ಮರುಭರಿಕೆ ಮೊತ್ತವನ್ನು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಎನ್.ಇ.ಎಫ್.ಟಿ ವ್ಯವಸ್ಥೆ ಮೂಲಕ ಜಮಾ ಮಾಡಲಾಗುವುದೆಂದು ಸರ್ಕಾರದ ಆದೇಶ ಸಂಖ್ಯೆ:ಸ.ಕ.ಇ./201/ಬಿ.ಎಂ.ಎಸ್.2011 ಬೆಂಗಳೂರು ದಿನಾಂಕ: 23–06–2012ರಲ್ಲಿ ತಿಳಿಸಿರುತ್ತಾರೆ.
8. ವಿಷಯವಾರು ಹಾಜರಾತಿ ಮತ್ತು ಆಂತರಿಕ ಅಂಕಗಳ ಮಾರ್ಕ್ಸ್ ಲೀಸ್ಟ್‌ಗಳನ್ನು ಕಡ್ಡಾಯವಾಗಿ ಸಮರ್ಪಕವಾಗಿ ಪರಿಶೀಲಿಸಿ ಶೈಕ್ಷಣಿಕ ವೇಳಾಪಟ್ಟಿಯನುಸಾರ **ದಿನಾಂಕ: 22.05.2026ರ** ಮುಂಚೆಯೇ Online ಮುಖಾಂತರ ಸಲ್ಲಿಸಬೇಕು. ಫಲಿತಾಂಶ ನೀಡಿದ ನಂತರ ಯಾವುದೇ ತಿದ್ದುಪಡಿ/ ಮಾರ್ಪಾಡುಗಳಿಗೆ ಅವಕಾಶ ಇರುವುದಿಲ್ಲ.
9. ವಿದ್ಯಾರ್ಥಿಗಳ ಪರೀಕ್ಷಾ ಪ್ರವೇಶ ಪತ್ರವನ್ನು ವಿಶ್ವವಿದ್ಯಾನಿಲಯದ ನಿರ್ದೇಶಾನುಸಾರ ಕಾಲೇಜುಗಳಲ್ಲಿ ಮುದ್ರಿಸಿ ಒದಗಿಸತಕ್ಕದ್ದು.
10. ವಿಶ್ವವಿದ್ಯಾನಿಲಯವು ಕಾಲೇಜುಗಳಿಗೆ ಒದಗಿಸುವ ಪ್ರಶ್ನೆ ಪತ್ರಿಕೆಗಳ ಸಂಖ್ಯೆಯನ್ನು UUCMS ನ login ಮುಖಾಂತರ ತಿಳಿಸುವುದು. ಕಾಲೇಜುಗಳು ಇದನ್ನು ಪರಿಶೀಲಿಸಿ ಯಾವುದಾದರು ವ್ಯತ್ಯಾಸವಿದ್ದರೆ ಅದನ್ನು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಗಮನಕ್ಕೆ ತರುವುದು.
11. Invigilator Dairy ಯನ್ನು (02 ಪ್ರತಿಗಳು) ಆನ್‌ಲೈನ್ ಮೂಲಕವೇ ಸಿದ್ದಪಡಿಸಿಕೊಳ್ಳಬೇಕು ಹಾಗೂ ಆಯಾ ದಿನದ ಉತ್ತರ ಪತ್ರಿಕೆ ಬಂಡಲ್‌ಗಳ ಜೊತೆಯಲ್ಲಿಯೇ 01 ಪ್ರತಿಯನ್ನು ಕಳುಹಿಸಿಕೊಡುವುದು.

12. ಪರೀಕ್ಷೆಗೆ ಗೈರುಹಾಜರಾದ ವಿದ್ಯಾರ್ಥಿಗಳ ನೊಂದಣಿ ಸಂಖ್ಯೆ ಮತ್ತು ವಿಷಯವನ್ನು (QP Code) ಆನ್‌ಲೈನ್ ಮೂಲಕವೇ ನಮೂದಿಸುವುದು.
13. ನಿಯಮಾನುಸಾರ ವಿಶ್ವವಿದ್ಯಾನಿಲಯವು ಅನುಮೋದನೆ ನೀಡಿರುವ ವಿದ್ಯಾರ್ಥಿಗಳಿಂದ ಮಾತ್ರ ಪರೀಕ್ಷಾ ಅರ್ಜಿ ಹಾಗೂ ಶುಲ್ಕ ಸಂಗ್ರಹಿಸಬೇಕು.
14. ಉತ್ತರ ಪತ್ರಿಕೆಗಳ ಬೇಡಿಕೆ ಪಟ್ಟಿಯನ್ನು **ದಿನಾಂಕ:25.04.2026** ರೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ತಪ್ಪದೇ ಸಲ್ಲಿಸತಕ್ಕದ್ದು.
15. ವಿಶ್ವವಿದ್ಯಾನಿಲಯದ ಆಂತರಿಕ ಕಿರುಪರೀಕ್ಷೆಯ ಉತ್ತರ ಪತ್ರಿಕೆ (ಬ್ಲೂ ಬುಕ್) ಗಳನ್ನು ಹಿಂಪಡೆಯುವುದರಿಂದ ಸೈದ್ಧಾಂತಿಕ ಪರೀಕ್ಷೆ ಪ್ರಾರಂಭಕ್ಕೆ ಮುಂಚೆ ಆಂತರಿಕ ಅಂಕಗಳಿಗೆ ಸಂಬಂಧಿಸಿದಂತೆ ಯಾವುದೇ ತೊಂದರೆಗಳು ಇದ್ದಲ್ಲಿ ಅದನ್ನು ಬಗೆಹರಿಸಿಕೊಳ್ಳಬೇಕು. ತದನಂತರ ಬರುವಂತಹ ಆಂತರಿಕ ಅಂಕಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.
16. ಯಾವುದೇ ವಿದ್ಯಾರ್ಥಿಯ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ನಮೂದಿಸದೇ ಹಾರ್ಡ್‌ಕಾಪಿಯನ್ನು ನಂತರ ಕಾಲೇಜಿನಿಂದ ಕಳುಹಿಸಿಕೊಟ್ಟಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹ ಮನವಿಗಳನ್ನು ತಿರಸ್ಕರಿಸಲಾಗುವುದು.
17. ಪರೀಕ್ಷಾ ಶುಲ್ಕವನ್ನು ಪಾವತಿಸದೇ ಇರುವ ವಿದ್ಯಾರ್ಥಿಗಳನ್ನು ಪರೀಕ್ಷೆ ಬರೆಯಲು ಅನುಮತಿಸಿ ನಂತರದಲ್ಲಿ ಫಲಿತಾಂಶ ಬಾರದ ಬಗ್ಗೆ ದೂರು ನೀಡುವುದನ್ನು ಗಮನಿಸಲಾಗಿದೆ. ಈ ಬಾರಿ ಇಂತಹ ಪ್ರಕರಣಗಳು ಬಾರದಂತೆ ಎಚ್ಚರವಹಿಸಬೇಕು. ಒಮ್ಮೆ ಪರೀಕ್ಷೆ ಬರೆಸಿದಲ್ಲಿ ಅಭ್ಯರ್ಥಿ ಪಟ್ಟಿಯಲ್ಲಿ ಹೆಸರು ಇಲ್ಲದವರ ಫಲಿತಾಂಶ ನೀಡಲು ಅವಕಾಶವಿರದಂತೆ ಸಾಫ್ಟ್‌ವೇರ್‌ನಲ್ಲಿ ಮಾರ್ಪಾಡು ಮಾಡಿಕೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ಇದನ್ನು ತಿಳಿಸುವುದು.
18. ಪ್ರಸ್ತುತ ಸಾಲಿನಲ್ಲಿ ಪ್ರವೇಶ ಪಡೆದು ಶೈಕ್ಷಣಿಕ ವಿಭಾಗದಿಂದ ಅನುಮೋದನೆಗೊಂಡ ವಿದ್ಯಾರ್ಥಿಗಳನ್ನು ಮಾತ್ರ ಪರೀಕ್ಷೆಗೆ ಹಾಜರು ಪಡಿಸುವ ಹೊಣೆಯು ಕಾಲೇಜಿನ ಪ್ರಾಂಶುಪಾಲರದ್ದಾಗಿರುತ್ತದೆ. ತಪ್ಪಿದಲ್ಲಿ ತಮ್ಮನ್ನೆ ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.
19. ಪರೀಕ್ಷೆಗೆ ಗೈರು ಹಾಜರಾದ ವಿದ್ಯಾರ್ಥಿಗಳ ಪಟ್ಟಿಯನ್ನು (Absentee Statement) ಪ್ರತ್ಯೇಕವಾಗಿ ಆಯಾ ದಿನದಂದೇ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಬೇಕು.
20. ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಕೂಡ ನಿಗದಿತ ಸಮಯದಲ್ಲಿ ಪರೀಕ್ಷಾ ಶುಲ್ಕ ಪಾವತಿಸಬೇಕು

## –: ವಿಶೇಷ ಸೂಚನೆ :–

**ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆ ಹಾಗೂ ಯು.ಜಿ.ಸಿ.ಯ ಆದೇಶದಂತೆ ವಿದ್ಯಾರ್ಥಿಗಳ ಎಲ್ಲಾ ಶೈಕ್ಷಣಿಕ ದಾಖಲೆಗಳನ್ನು National Academic Depository (NAD)ಗೆ ದಾಖಲಿಸಲಾಗುತ್ತಿದೆ. ಈ ಸಂಬಂಧ ಎಲ್ಲಾ ವಿದ್ಯಾರ್ಥಿಗಳು NAD ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ನೋಂದಣಿ ಮಾಡಿಕೊಂಡ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ದಾಖಲೆಗಳನ್ನು NAD ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಲು ಅವಕಾಶ ನೀಡಲಾಗುವುದು.**

**ಎಲ್ಲಾ ವಿದ್ಯಾರ್ಥಿಗಳು ABC ID ಯನ್ನು Create ಮಾಡಿಕೊಳ್ಳುವುದು ಕಡ್ಡಯವಾಗಿರುತ್ತದೆ, ಹಾಗೂ ಇದನ್ನು ಪ್ರಾಂಶುಪಾಲರು ತಮ್ಮ ಲಾಗಿನ್ ನಲ್ಲಿ Approve ಮಾಡಲು ಸೂಚಿಸಲಾಗಿದೆ.**

ಕುಲಸಚಿವರು (ಪರೀಕ್ಷಾಂಗ)
ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ – 577007

ಗೆ:
ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿ:

1. ಸಮಾಜ ಕಲ್ಯಾಣ ಅಧಿಕಾರಿಗಳು, ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
2. ಜಿಲ್ಲಾಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ದಾವಣಗೆರೆ/ಚಿತ್ರದುರ್ಗ ಜಿಲ್ಲೆ.
3. ಆಪ್ತಶಾಖೆ, ಮಾನ್ಯ ಕುಲಪತಿಗಳು, ಕುಲಸಚಿವ(ಆಡಳಿತ), ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4. ಉಪಕುಲಸಚಿವರು ಪರೀಕ್ಷಾಂಗ/ಆಡಳಿತ/ಹಣಕಾಸು ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
5. ಅಧೀಕ್ಷಕರು/ವಿಷಯ ನಿರ್ವಾಹಕರುಗಳು, ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
6. ಕಛೇರಿ ಪ್ರತಿ.